ಹೊರ ಬಿಟ್ಟಂತೆ, ಅವನಲ್ಲಿ ಹೊಸ ಕಥೆಯೊಂದು ಹುಟ್ಟಿಕೊಳ್ಳತೊಡಗಿತು.

ಮಾರನೇ ದಿನ ಗೆಳೆಯನೊಂದಿಗೆ ಜನ್ನತ್ ಸಿಗರೇಟ್ ಸೇದಲೋಸುಗ ಅವನು ರಂಜನೀಯವಾಗಿ ಹೇಳಿಕೊಂಡಿದ್ದ ಆ ಅಂಗಡಿಗೆ ಬಂದ.

ಹೆಸರು ಹಾಕಲು ಮರೆತು ವರ್ಷಗಳೇ ಕಳೆದರೂ ಹಂಪನ್ ಕಟ್ಟೆಯ ಮೊದಲ ತಿರುವಿನ ಆ ಅನಾಮಧೇಯ ಅಂಗಡಿಗೆ ಅದೆಷ್ಟು ಕಥೆ ಹೇಳಲಿಕ್ಕಿರಬಹುದು. ಬಲಕ್ಕೆ ಆತು ನಿಂತಂತಿರುವ ಡಾನ್ ಬಾಸ್ಕೋ ಹಾಲ್‌ನಲ್ಲಿ ಸದಾ ನಾಟಕ- ಸಂಗೀತ ರಸ ಮಂಜರಿಗಳು ನಡೆಯುತ್ತಲೇ ಇರುತ್ತವೆ. ರಸ್ತೆಯ ನೇರ ವಿರುದ್ಧ ದಿಕ್ಕಿನ ಶೆಟ್ಟಿ ಲಂಚ್ ಹೌಸ್. 'ತಂಬಾಕು ಆರೋಗ್ಯಕ್ಕೆ ಹಾನಿಕಾರಕ' ಎನ್ನುವ ಸಣ್ಣಗಿನ ಬೋರ್ಡೊಂದು ಅಲ್ಲಿ ತೂಗುತ್ತಿದ್ದರೂ, ಗಿರಾಕಿಯೊಬ್ಬ ಬಂದ ಕೂಡಲೇ ಕೇಳುವುದಿಷ್ಟು 'ಅಣ್ಣಾ, ಸಿಗರೇಟು ಉಂಟಾ?' ಅಂತ. ಅಷ್ಟು ಕೇಳಿದ್ದೇ ತಡ ಎಣ್ಣೆ ಸವರಿ ಮಿರುಗುವ ಆ ಅರೆ ಬೊಕ್ಕತಲೆಯ ಮಣ್ಣಿನ ಮಡಕೆಯಂತಹ ತಲೆಯನ್ನೆತ್ತಿ ಮೂಗಿನ ಮೇಲಿನ ಕನ್ನಡಕ ಮೇಲೇರಿಸುತ್ತಾ ದೇವಪ್ಪ ಎದ್ದು ನಿಲ್ಲುತ್ತಾನೆ. 'ಕಿಂಗ್ಸ್, ಲೈಟ್, ಸ್ಮಾಲ್, ಪ್ಲೇಯರ್ಸ್, ಬ್ರಿಸ್ಟಾಲ್...' ವಗೈರೆ ಹೆಸರನ್ನುಸುರುತ್ತಾರೆ. ಕೆಲವರು 'ದೇವಪ್ಪಣ್ಣಾ... ಲೈಟ್ಸ್ ಕೊಡಿ, ಕಿಂಗ್ ಕೊಡಿ...' ಅಚ್ಚುಕಟ್ಟಾಗಿ ತಾವು ಸೇದುವ ಸಿಗರೇಟಿನ ಹೆಸರನ್ನೇ ಕೇಳುತ್ತಾರೆ. ಸೇದುವವರ ಜೊತೆಯಾಗಿ ಬರುವ ಇಬ್ಬಿಬ್ಬರನ್ನು ಸೇರಿಸಿ 'ಎರಡಾ?' ಎನ್ನುತ್ತಾನೆ. ಇನ್ನು ಕೆಲವರ ಮುಖ ಕಂಡೊಡನೆಯೇ 'ಓ ನೀವಾ...' ಅಂತ ದೇವಪ್ಪ ಅವರಿಗಾಗುವ ಬ್ರಾಂಡನ್ನು ಕರಾರುವಾಕ್ಕಾಗಿ ಅವರೆದುರಲ್ಲಿ ಇರಿಸಿಬಿಡುತ್ತಾರೆ. ಅಷ್ಟರಲ್ಲೇ ಅವರಿಗೆ ಸಿಕ್ಕ ಸಿಗರೇಟನ್ನೆತ್ತಿಕೊಂಡು ಅಂಗಡಿಯೊಳಗಿನ ಆ ಬಾಗಿಲನ್ನು ಹೊಕ್ಕು ಬಿಡುತ್ತಾರೆ.

ಮುಂದಿನ ಕೊಠಡಿಯೊಂದು ಬ್ರಹ್ಮಾಂಡ. ಅಲ್ಲಿ ಹಾಗೊಂದು ಕೊಠಡಿ ಇರಬಹುದೇ ಎಂದು ಊಹಿಸಲಸಾಧ್ಯವಾದ ಕಟ್ಟಡ ರಚನೆಯದು. ಒಳ ಕೊಠಡಿಯು ಮಬ್ಬು ಮಬ್ಬಾಗಿ ಸದಾ ಸಿಗರೇಟಿನ ಹೊಗೆಯಲ್ಲಿ ಮುಳುಗಿರುತ್ತದೆ. ಹೋಲ್ಡರ್‌ಗೆ ಪೇರಿಸಿಟ್ಟ ಬಲ್ಬ್‌ನ ಬೆಳಕು ಅಲ್ಲಿ ಚೆಲ್ಲುತ್ತಿದ್ದರೂ ಅಲ್ಲಿ ಸೇದುವವರ ಹೊಗೆ ತುಂಬಿಕೊಂಡು ವಿಚಿತ್ರ ಪ್ರಪಂಚವೊಂದು ಸೃಷ್ಟಿಯಾಗಿರುವುದು ಸುಳ್ಳಲ್ಲ. ಕೊಠಡಿಯ ಮಧ್ಯದಲ್ಲಿರಿಸಿದ ಟೇಬಲಿನಲ್ಲೊಂದು ಸಣ್ಣ

